3) ತೇರದಾಳ್ ಮೀನುಗಾರರ ಸಹಕಾರ ಸಂಘಕ್ಕೆ 2 ಕೆರೆಗಳ ಗುತ್ತಿಗೆಯನ್ನು 2008–09ನೇ ಸಾಲಿಗೆ ನವೀಕರಿಸಲಾಗಿದೆ.

ಈ ಮೀನುಗಾರರಿಗೆ ಇಲಾಖೆಯಿಂದ ಯಾವ ಯಾವ ಸೌಲಭ್ಯಗಳನ್ನು ಕೊಡಲಾಗುವುದು?

ಒಳನಾಡು ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು ಅಥವಾ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸುವುದು.
- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ
  - ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ
  - ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ
  - ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯಧನ
  - ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ
  - ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ
- ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆಯ ಅಭಿವೃದ್ಧಿ.
- ಇದಲ್ಲದೆ ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

196 ಶ್ರೀ ಸಿದ್ದು ಸವದಿ

ಮಾನ್ಯ ಸಾರಿಗೆ ಸಚಿವರು.

ಅ) ತೇರದಾಳ ಮತಕ್ಷೇತ್ರದಲ್ಲಿ ತೇರದಾಳ, ಮಹಾಲಿಂಗಪುರ ಮತ್ತು ರಬಕವಿ ಬನಹಟ್ಟಿ ನಗರಗಳಲ್ಲಿ ಬಸ್ ಡಿಪೋ ಪ್ರಾರಂಭಿಸಲು ಯೋಚಿಸಲಾಗಿದೆಯೇ; ಈ ಬಗ್ಗೆ ಬೇಡಿಕೆ ಇದು ಅದನ್ನು ಯಾವಾಗ ಪ್ರಾರಂಭಿಸಲಾಗುವುದು;

ಇಲ್ಲ.

ಜಮಖಂಡಿ ಘಟಕವು ತೇರದಾಳ, ರಬಕವಿ ಹಾಗೂ ಬನಹಟ್ಟಿ ನಗರಗಳಿಗೆ ಕ್ರಮವಾಗಿ 35,18, ಹಾಗೂ 14 ಕಿ.ಮೀ. ಅಂತರದಲ್ಲಿದ್ದು ಅಲ್ಲಿಂದಲೇ ವಾಹನಗಳ ಕಾರ್ಯಾಚರಣೆ ಮಾಡಲಾಗುವುದು. ಮಹಾಲಿಂಗಪುರದಲ್ಲಿ ಬಸ್ ಡಿಪೋ ನಿರ್ಮಿಸಲು ಬಸ್ ನಿಲ್ದಾಣದ ಹತ್ತಿರದಲ್ಲಿ ಸೂಕ್ತ ನಿವೇಶನವನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪಡೆದ ನಂತರ ಸಂಸ್ಥೆಯ ಆಯವ್ಯಯದಲ್ಲಿ ಪ್ರಾವಧಾನ ಮಾಡಿಕೊಂಡು ಮತ್ತು ಬಸ್ ಡಿಪೋ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಜಮಖಂಡಿ ಮತ್ತು ಮುಧೋಳ ಡಿಪೋಗಳಲ್ಲಿರುವ 18 ಅವಧಿ ಮೀರಿದ ಬಸ್ಸುಗಳ ಸಂಖ್ಯೆ ಎಷ್ಟು ಹೊಸ ಬಸ್ಸುಗಳನ್ನು ಯಾವಾಗ ಪೂರೈಸಲಾಗುವುದು;

ಜಮಖಂಡಿ ಡಿಪೋದಲ್ಲಿ 34 ಮತ್ತು ಮುಧೋಳ ಡಿಪೋದಲ್ಲಿ 18 ಅವಧಿ ಮೀರಿದ ಬಸ್ಸುಗಳಿರುತ್ತವೆ. ಪ್ರಸಕ್ತ 2008–09ನೇ ಸಾಲಿನಲ್ಲಿ ಜಮಖಂಡಿ ಘಟಕಕ್ಕೆ 4 ಹೊಸ ಬಸ್ಸುಗಳನ್ನು ಮತ್ತು ಮುಧೋಳ ಘಟಕಕ್ಕೆ 2 ಹೊಸ ಬಸ್ಸುಗಳನ್ನು ಪೂರೈಸಲಾಗಿದೆ. ಇನ್ನೂ ಹೆಚ್ಚಿನ ಹೊಸ ಬಸ್ಸುಗಳನ್ನು ಹಂತ–ಹಂತವಾಗಿ ಪೂರೈಸಲಾಗುವುದು.

ಇ) ಅನೇಕ ಗ್ರಾಮಾಂತರ ಬಸ್ಸುಗಳ ಸಂಚಾರವನ್ನು ನಿಲ್ಲಿಸಲಾಗಿದ್ದು ಪುನರ್ ಪ್ರಾರಂಭಿಸಲಾಗುವುದೇ?

ತೇರದಾಳ, ಮಹಾಲಿಂಗಪುರ, ರಬಕವಿ ಹಾಗೂ ಬನಹಟ್ಟಿ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಯಾವುದೇ ಮಾರ್ಗಗಳನ್ನು ರದ್ದು ಪಡಿಸಿರುವುದಿಲ್ಲ.

200 ಶ್ರೀ.ಸುರೇಶ್‌ಬಾಬು ಸಿ.ಬಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೇತುವೆಗಳ ಅವಶ್ಯಕತೆ ಎಷ್ಟಿದೆ ಮತ್ತು ಗುರುತಿಸಲಾಗಿರುವ ಸ್ಥಳಗಳು ಯಾವುವು.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಮುಖವಾಗಿ 15 ಸೇತುವೆಗಳ ಅವಶ್ಯಕತೆಯನ್ನು ಗುರುತಿಸಿದ್ದು ಅವುಗಳ ವಿವರಗಳು ಕೆಳಕಂಡಂತಿದೆ.

ಕೆ.ಆರ್.ಡಿ.ಸಿ.ಎಲ್.ವತಿಯಿಂದ ತೆಗೆದುಕೊಂಡಿರುವ ಸೇತುವೆಗಳ ವಿವರ:

ಹಂತ	ಅನುಮೋದಿತ ಸೇತುವೆಗಳ ಸಂಖ್ಯೆ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ